## ನನ್ನ ಓದು




**ಸಿದ್ಧಿಯ ಕೈ ಚಂದ್ರನತ್ತ (ಕಾದಂಬರಿ)**
ಲೇ: ಕೃಷ್ಣಮೂರ್ತಿ ಹನೂರು
ಪು: 264 ಬೆಲೆ: 190
ಪ್ರ: ಅಭಿರುಚಿ ಪ್ರಕಾಶನ, ನಂ. 386, 14ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಸರಸ್ವತೀಪುರ, ಮೈಸೂರು – 570 009

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.

ನರೇಂದ್ರ ಪೈ

# ಹಲವು ಕಥಾನಕಗಳ ನಿರೂಪಣೆ

'ಸಿದ್ಧಿಯ ಕೈ ಚಂದ್ರನತ್ತ' ಕಾದಂಬರಿಯಲ್ಲಿ ಕೃಷ್ಣಮೂರ್ತಿ ಹನೂರು ಅವರು ಎಷ್ಟೆಲ್ಲ ಸಂಗತಿಗಳಿಗೆ ಕೈ ಚಾಚಿದ್ದಾರೆಂದರೆ ಆಶ್ಚರ್ಯವಾಗುತ್ತದೆ. ಇಡೀ ಕಾದಂಬರಿಯನ್ನು ಓದಿ ಮುಗಿಸಿದ ಮೇಲೆ ಇದರ ಬಗ್ಗೆ ಯೋಚಿಸಿದರೆ ಒಂದೊಂದು ಸಾರಿ ಒಂದೊಂದು ಅರ್ಥ ಹೊಳೆಯಿಸುತ್ತ ಅರೆರೆ, ಹೀಗೂ ಇರಬಹುದಲ್ಲವೆ ಇದರ ಹುನ್ನಾರ ಎನಿಸತೊಡಗುತ್ತದೆ. ಅಂಥ ಕೆಲವು ಹೊಳಹುಗಳನ್ನಷ್ಟೇ ಇಲ್ಲಿ ಹಂಚಿಕೊಳ್ಳಬಹುದು. ಇನ್ನಷ್ಟನ್ನು ನಿಮಗೇ ಬಿಟ್ಟು ಬಿಡಬಹುದು.

ಶಿಕ್ಷಣ ವ್ಯವಸ್ಥೆಯ ಮುಖೇನ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಪ್ರಜ್ಞೆ ಹೇಗೆಲ್ಲ ನಮ್ಮ ದೈನಂದಿನದಲ್ಲಿ ತನ್ನ ಮುಖ ತೋರಿಸಬಹುದು ಎನ್ನುವುದನ್ನು ಕೇಂದ್ರದಲ್ಲಿರಿಸಿಕೊಂಡರೂ ಮನುಷ್ಯ ಸಂಬಂಧ, ಬದುಕನ್ನು ಉತ್ತಮ ಪಡಿಸಿಕೊಳ್ಳುವ ಮನುಷ್ಯನ ತುಡಿತ, ಅವನು ಇಷ್ಟಪಡುವ ಮೌಲ್ಯಗಳು ಮತ್ತು ಅನುಸರಿಸಲು ಕಷ್ಟಪಡುವ ವಾಸ್ತವದ ಸವಾಲುಗಳನ್ನು ತನ್ನ ಒಡಲಿನಲ್ಲಿ ಸೆಳೆದುಕೊಂಡು, ಮೇಲ್ನೋಟಕ್ಕೆ